**ಚಾಸಾ-17 ಪ್ರಾಸಾ-9**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 5722/2008**

| | |
|---|---|
| **ಸಾಕ್ಷಿದಾರರ ಹೆಸರು** | ಕೆ.ನಾಗಭೂಷಣ್ |
| **ತಂದೆಯ ಹೆಸರು** | ಕೆ.ನಾಗಾ ಶಾಸ್ತ್ರಿ |
| **ವಯಸ್ಸು** | 73 ವರ್ಷ |
| **ಉದ್ಯೋಗ** | ನಿವೃತ್ತ ಪಿಐ |
| **ವಾಸ** | ಬನಶಂಕರಿ ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 01.08.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

2005 -2006 ರಲ್ಲಿ ನಾನು ಎಸ್.ಜೆ.ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪಿಐ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.19.04.2006 ರಂದು ಚಾಸಾ-15 ರವರಿಂದ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದುಕೊಂಡು ಯೂನಿಟಿ ಸ್ಥಳಕ್ಕೆ ಭೇಟಿ ಕೊಟ್ಟು ದೂರುದಾರರ ಸಮಕ್ಷಮ ಮಹಜರ್ ಜರುಗಿಸಿರುತ್ತೇನೆ. ನಾನು ಈಗ ನೋಡುತ್ತಿರುವ ದಾಖಲೆ ನಾನು ಕೈಗೊಂಡ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು. ಸಾಕ್ಷಿ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಚಾಸಾ-13 ಮತ್ತು 14 ಗಳನ್ನು ಆರೋಪಿತರನ್ನು ಪತ್ತೆ ಮಾಡಲು ನೇಮಕ ಮಾಡಿರುತ್ತೇನೆ. ದಿ.22.04.2006 ರಂದು 01.45ಗಂಟೆಗೆ ಚಾಸಾ-13 ಮತ್ತು ಚಾಸಾ-14 ರವರು ಆರೋಪಿ ಸಾಧನರವರನ್ನು ಪತ್ತೆ ಮಾಡಿ ನನ್ನ ಮುಂದೆ ಹಾಜರು ಪಡಿಸಿರುತ್ತಾರೆ ಮತ್ತು ಆ ಕುರಿತು ವರದಿಯನ್ನು ನೀಡಿರುತ್ತಾರೆ. ನಂತರ ನಾನು ವಿಚಾರಣೆಯ ಮಾಡಿ ಆರೋಪಿಯ ಸ್ವ ಇಚ್ಚೆ ಹೇಳಿಕೆಯನ್ನು ಪಡೆದಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ಆರೋಪಿ ನೀಡಿರುವ ಹೇಳಿಕೆ ಆಗಿದ್ದು ಅದನ್ನು ನಿಪಿ.49 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಸಹಿಯನ್ನು ನಿಪಿ.49(ಎ) ಎಂದು ಗುರುತಿಸಲಾಯಿತು. ಅದರಂತೆ ಆರೋಪಿ ರವರ ಮನೆಗೆ ಹೋಗಿ ಚಾಸಾ-11 ಮತ್ತು 12 ರವರ ಸಮಕ್ಷಮ ಮನೆಯನ್ನು ಶೋಧನೆ ಮಾಡಲಾಗಿ

ಒಂದು ಬೀರುವಿನಲ್ಲಿದ್ದ ಕೆಲವು ದಾಖಲೆಗಳನ್ನು ಜಪ್ತಿ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ಪಿಎಫ್ ನಂ.32/2006 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದರಲ್ಲಿ ಆರೋಪಿ ಸಾಧನ ಕೈ ಬರಹದಲ್ಲಿ ಬರೆದ ಎರಡು ಹಾಳೆಗಳು, ಲೆಡ್ಜರ್ ಅಕೌಂಟ್ 64 ಪುಟ , ಕ್ಯಾಶ್ ಬುಕ್ 35 ಪುಟಗಳು, ಕಾರ್ಗೋ ಮೂವರ್ಸ್ ಹೆಸರಿನ ಓರಿಯಂಟಲ್ ವೀಮಾ ಕಂಪನಿಯ ಒಂದು ಬಾಂಡ್ 21 ಪುಟ , ಜೆರಾಕ್ಸ್ ವೋಚರ್ ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಸದರಿ ವಸ್ತುಗಳನ್ನು ವಶಪಡಿಸಿಕೊಂಡು ಮಾಡಿದ ಪಂಚನಾಮೆ ಆಗಿರುತ್ತದೆ. ಅದನ್ನು ಈಗಾಗಲೇ ನಿಪಿ.16 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ.16(ಬಿ) ಎಂದು ಗುರುತಿಸಲಾಯಿತು.

2. ನಂತರ ಆರೋಪಿ ಕೆಲಸ ಮಾಡುತ್ತಿದ್ದ ಕಾರ್ಗೋ ಮೂವರ್ಸ್, ಯುನಿಟಿ ಬಿಲ್ಡಿಂಗ್ ಹೋಗಿ ಅವರು ಕರ್ತವ್ಯ ಮಾಡುತ್ತಿದ್ದ ಜಾಗದಲ್ಲಿ ಶೋಧ ನೆ ಮಾಡಲಾಗಿ ಆದರೆ ಅಲ್ಲಿ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ. ಈಗ ನೋಡುತ್ತಿರುವ ದಾಖಲೆ ಸದರಿ ಪಂಚನಾಮೆ ಆಗಿರುತ್ತದೆ. ಅದನ್ನು ಈಗಾಗಲೇ ನಿಪಿ.17 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ.17(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿಯೊಂದಿಗೆ ಮರಳಿ ಠಾಣೆಗೆ ಬಂದು ಆರೋಪಿಯ ಮಾದರಿ ಸಹಿಗಳನ್ನು ಪಡೆದಿರುತ್ತೇನೆ ಮತ್ತು ಮಾದರಿ ಕೈ ಬರಹಗಳನ್ನು ಪಡೆದಿರುತ್ತೇನೆ ಮತ್ತು ಹಿಂದಿನ ಆರೋಪಿಯ ಕೈ ಬರಹಗಳನ್ನು ಪಡೆದಿರುತ್ತೇನೆ. ಅದೇ ದಿನ ಆರೋಪಿಯ ನೇಮಕಾತಿ ಪತ್ರದ ಪ್ರತಿಯನ್ನು ಪಡೆದಿರುತ್ತೇನೆ. ಅದೇ ದಿನ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನ್ನಕ್ಕೆ ಒಪ್ಪಿಸಿರುತ್ತೇನೆ. ಚಾಸಾ-13 ಮತ್ತು 14 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿ.28.04.2006 ರಂದು ಈ ಪ್ರಕರಣದ ಸಾಕ್ಷಿದಾರರಾದ ಸಹನಾ ರಹಿಮನ್ ರವರನ್ನು ಠಾಣೆಗೆ ಕರೆಸಿ ಅವರ ಮಾದರಿ ಸಹಿ, ಕೈ ಬರಹ , ಮತ್ತು ಹಿಂದಿನ ಒಪ್ಪಿತ ಕೈ ಬರಹಗಳನ್ನು ಪಡೆದಿರುತ್ತೇನೆ. ದಿ.02.05.2006 ರಂದು ಈ ಪ್ರಕರಣದ ಸಾಕ್ಷಿದಾರರಾದ ಜಗನಾಥ ಮತ್ತು ಬಾಲಾಜಿ ರವರ(ಚಾಸಾ-3 ಮತ್ತು 4) ಹೇಳಿಕೆಗಳನ್ನು ಪಡೆದಿರುತ್ತೇನೆ. ದಿ.12.05.2006 ರಂದು

**ಚಾಸಾ-17 ಪ್ರಾಸಾ-9**

ಬ್ಯಾಟರಾಯನಪುರ ಪೊಲೀಸ್ ಠಾಣೆಗೆ ಒಂದು ಪತ್ರವನ್ನು ಬರೆದು ಈ ಹಿಂದೆ ಈ ಪ್ರಕರಣದ ದೂರುದಾರರ ಇದೇ ಆರೋಪಿಯ ವಿರುದ್ದ ಕಳ್ಳತನದ ದೂರು ನೀಡಿದ್ದ ಅದರಲ್ಲಿರುವ ಕೆಲವು ದಾಖಲೆಗಳನ್ನು ಕಳುಹಿಸಿಕೊಡುವಂತೆ ಮನವಿಯನ್ನು ಸಲ್ಲಿಸಿರುತ್ತೇನೆ. ದಿ.27.05.2006 ರಂದು ಈ ಪ್ರಕರಣದಲ್ಲಿ ವಶ ಪಡಿಸಿಕೊಂಡ ಪ್ರಶ್ನಿತ ದಾಖಲೆಗಳನ್ನು ಮತ್ತು ಆರೋಪಿಯ ಮತ್ತು ದೂರುದಾರರ ಮಾದರಿ ಮತ್ತು ಒಪ್ಪಿತ ಸಹಿಗಳನ್ನು ತಾಳೆ ಮಾಡಿ ವರದಿ ಕೊಡುವಂತೆ ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ಅದೇ ರೀತಿ ಸಂಜೆ ಎಫ್ ಎಸ್ ಎಲ್ ನಲ್ಲಿ ಸ್ವೀಕರಿಸಿದ ಕುರಿತು ವರದಿ ನೀಡಿರುತ್ತಾರೆ. ದಿ.16.06.2006 ರಂದು ನನಗೆ ಮೈಕೋ ಲೇಔಟ್ ಪೊಲೀಸ್ ಠಾಣೆಗೆ ವರ್ಗಾವಣೆ ಆಗಿದ್ದರಿಂದ ಕಡತವನ್ನು ಚಾಸಾ-18 ರವರಿಗೆ ವಹಿಸಿರುತ್ತೇನೆ.

ಈ ಹಂತದಲ್ಲಿ ಎಫ್.ಎಸ್.ಎಲ್ ಗೆ ಕಳುಹಿಸಿದ ದಾಖಲೆಗಳು ಬರದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಹಿ.ಸ.ಸ.ಅರವರು ಸಮಯ ಕೋರಿರುತ್ತಾರೆ. ನೀಡಲಾಯಿತು. ಈ ಹಂತದಲ್ಲಿ ಆರೋಪಿ ಪರ ವಕೀಲರು ಈ ಪ್ರಕರಣ ಬಹಳ ಹಳೆಯ ಪ್ರಕರಣದ ಈ ಹಿಂದೆ ಚಾಸಾ-1 ರವರು ಪಾಟೀಸವಾಲಿಗೆ ಸುಮಾರು 48 ವಾರೆಂಟ್ ಗಳಾದರು ಬಂದಿರಲಿಲ್ಲ. ಕೊನೆಯ ಬಾರಿಗೆ ಬಂದಾಗ ಈ ನ್ಯಾಯಾಲಯ ಪಾಟಿಸವಾಲಿಗೆ ನಮಗೆ ಸಮಯ ನೀಡಿಲಿಲ್ಲ. ಆದ್ದರಿಂದ ಈ ಕಾಲವಕಾಶ ನೀಡಬಾರದು ಎಂದು ತಕರಾರು ಮಾಡಿರುತ್ತಾರೆ. ಸದರಿ ಎಫ್.ಎಸ್.ಎಲ್ ಗೆ ಕಳುಹಿಸಿದ ದಾಖಲೆಗಳು ಈ ಪ್ರಕರಣದ ಮುಖ್ಯ ದಾಖಲೆಗಳಾಗಿರುತ್ತವೆ. ಅವುಗಳು ಎಫ್.ಎಸ್.ಎಲ್ ನಿಂದ ಬರದೇ ಇದ್ದ ಕಾರಣ ಮತ್ತು ಎಫ್.ಎಸ್.ಎಲ್ ವರದಿ ಸಹ ಬರದೇ ಇದ್ದರಿಂದ ಹಿ.ಸ,ಸ.ಅ ರವರು ಕಾಲವಕಾಶ ಕೋರುತ್ತಿದ್ದು , ಈ ಹಿಂದೆ ಸದರಿ ದಾಖಲೆಗಳು ಚಾಸಾ-1 ರವರ ಮುಖ್ಯ ವಿಚಾರಣೆಗೆ ಮತ್ತು ಪಾಟೀಸವಾಲಿಗೆ ಅವಶ್ಯಕತೆ ಇರಲಿಲ್ಲ. ಆದ್ದರಿಂದ , ಈ ಹಿಂದೆ ಅದು ಗಮನಕ್ಕೆ ಬಂದಿರಲಿಲ್ಲ. ಆದ್ದರಿಂದ, ಕಾಲವಕಾಶ ನೀಡಬಹುದಾಗಿದೆ. ಆದ್ದರಿಂದ ಆರೋಪಿತರ ಪರ ವಕೀಲರ ತಕಾರರನ್ನು ತಳ್ಳಿ ಹಾಕಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**